5. ಕರ್ನಾಟಕ ಲೋಕಾಯುಕ್ತ (ತಿದ್ದುಪಡಿ) ವಿಧೇಯಕ, 2015ರ ಮೇಲೆ ನಡೆದ ಚರ್ಚೆಯ ಸಂದರ್ಭದಲ್ಲಿ ಪ್ರಸ್ತಾಪಿಸಲಾದ ವಿಷಯದ ಬಗ್ಗೆ ಸ್ಪಷ್ಟೀಕರಣ

ಶ್ರೀ ಟಿ.ಬಿ. ಜಯಚಂದ್ರ (ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಹಾಗೂ ಪಶುಸಂಗೋಪನೆ ಮತ್ತು ಮುಜರಾಯಿ ಸಚಿವರು):– ಮಾನ್ಯ ಅಧ್ಯಕ್ಷರೆ, ಇಷ್ಟೊತ್ತು ಚರ್ಚೆಯಾಗಿರುವ ಹಿನ್ನೆಲೆಯಲ್ಲಿ, ಕಡತಕ್ಕೆ ಹೋಗಿರುವಂತಹ ಮಾಹಿತಿಯ ದಾಖಲೆಯನ್ನು ಸರಿಪಡಿಸುವಂತಹ ಅನಿವಾರ್ಯತೆ ನಮ್ಮ ಮುಂದೆ ಇದೆ. ಆ ಲೆಟರ್ಸ್‌ನಲ್ಲಿ ಏನಿದೆ ಎನ್ನುವ ವಿವರಣೆಯನ್ನು ಹೇಳುವುದಕ್ಕೆ ನನಗೆ ಅವಕಾಶ ಮಾಡಿಕೊಡಿ.

ಅಧ್ಯಕ್ಷರು:– ಹೇಳಿ.

ಶ್ರೀ ಟಿ.ಬಿ. ಜಯಚಂದ್ರ:– ಮಾನ್ಯ ಅಧ್ಯಕ್ಷರೆ, ಲೋಕಾಯುಕ್ತ ಮಸೂದೆ ಬಗ್ಗೆ ಚರ್ಚೆ ಮಾಡುವಂತಹ ಸಂದರ್ಭದಲ್ಲಿ ಕೆಲವು ವಿಚಾರಗಳು ಪ್ರಸ್ತಾಪವಾದವು. ಇದನ್ನು special investigation ಮಾಡಬೇಕಿತ್ತೇ ಮತ್ತು ಯಾರ ನೇತೃತ್ವದಲ್ಲಿ ಮಾಡಬೇಕೆಂಬ ವಿಚಾರದಲ್ಲಿ ವಿರೋಧಪಕ್ಷದ ಎಲ್ಲಾ ಸದಸ್ಯರು ಕೂಡ ಧ್ವನಿ ಎತ್ತಿದ ಸಂದರ್ಭದಲ್ಲಿ, ಮಾನ್ಯ ಸದಸ್ಯರಾದ ಶ್ರೀ ವೈ.ಎಸ್.ವಿ. ದತ್ತಾರವರು ಸದನದಲ್ಲಿ ಒಂದು ಪತ್ರವನ್ನು ಓದಿ reference ಅನ್ನು ಕೊಟ್ಟರು. ಆ ಪತ್ರದಲ್ಲಿ ಏನಿದೆ ಎನ್ನುವುದನ್ನು ತಿಳಿದುಕೊಳ್ಳುವುದಕ್ಕಾಗಿ ನಾನು ಕಡತವನ್ನು ತರಿಸಿ ನೋಡಿದೆ. ಎಲ್ಲೋ ಒಂದು ಕಡೆ ಆ records ಅನ್ನು ಸೆಟ್‌ರೈಟ್ ಮಾಡಬೇಕೆನ್ನುವ ಕಾರಣಕ್ಕೆ ಮತ್ತು ಈಗಾಗಲೇ ಈ ಬಗ್ಗೆ ಸಭೆಯಿಂದ ಸಂದೇಶವೇನು ಹೋಗಿದೆ, ಅದು ಸರಿಯಲ್ಲ ಎಂದು ಈಗ ಹೇಳಲೇಬೇಕಾಗುತ್ತದೆ. ಇದಕ್ಕೆ ಸಂಬಂಧಿಸಿದಂತೆ ಲೋಕಾಯುಕ್ತ ಕಛೇರಿಯಿಂದ ಬಂದ ಒಂದು ಲೆಟರ್‌ನ್ನು ಈಗ ಓದುತ್ತೇನೆ.

Dated: 27.06.2015

Addressed to:

The Chief Secretary to Government,

Government o Karnataka,

Vidhana Soudha,

Bangalore.

In the Print media of today it appeared that there are allegations of bribe in Lokayukta office. The allegations are very serious in nature damaging the reputed of the Lokayukta institution. It is alleged that the bribes are collected from the officers to avoid raids on them. The raids are generally conducted by the Police wing of the Karnataka Lokayukta, by the Superintendent of Police along with the other staff. In view of the same, it is not proper to conduct the investigation on the allegation appeared on the print media by the Lokayukta office. Therefore, I am directed by the Hon'ble Lokayukta to request the Government to constitute Special Investigation Team headed by an officer not below the rank of a Additional Director of General of Police and pass an immediate order in this regard so that the investigation could start immediately.

Yours faithfully,

Sd/-
(H.R. Deshapande)
Registrar,
Karnataka Lokayukta,
Bangalore.
Dated: 27.06.2015

The Second letter ಲೋಕಾಯುಕ್ತದಿಂದ ಬಂದಿರುವ ಪತ್ರ was again addressed to the Chief Secretary.

Dated: 28.06.2015

Addressed to:

The Chief Secretary to Government,

Government o Karnataka,

Vidhana Soudha,

Bangalore.

Subject : Enquiry into the allegations of demand, extortion of money from Sri Krishna Murthy, Executive Engineer, Zilla panchayat, Bangalore Urban.

Reference: 1) Suo-motu investigation taken by Hon'ble Lokayukta, in the above matter under the Lokayukta.

2) Letter of this office dated: 26.06.2015, addressing to Joint Commissioner, Crime, CCB, Bangalore City.

3) Letter No. CB/JCB/CRM/CC/99 of 2015, Dt: 27.06.2015 of Sri M. Chandra Shekar, IPS, Joint Commissionerf (Crime), Bangalore City.

4) This office letter bearing No.: LOK/ADMIN-1/23.15-16 dated: 27.06.2015

With reference to the above the Hon'ble Lokayukta after taking suo-motu investigation in to the above said allegation has entrusted the enquiry to Sri M. Chandrashekar, Joint Commissioner (Crime), City Crime Branch, Bangalore, under section 15(3) of the Karnataka Lokayukta Act 1984. Accordingly letter dated 26.06.2015 was addressed to Sri M. Chandrashekar, IPS, Joint Commissioner (Crime), CCB, Bangalore for conducting an enquiry into the matter and to submit a report as expeditiously as possible. Sri M. Chandrashekar, Joint Commissioner (Crime), City Crime Branch, Bangalore City, by letter dated, 27.06.2015, requested for reconsidering the directions in view of the fact stated in this letter. A copy of his letter dated 27.06.2015 is enclosed herewith. In view of the same, I am directed by the Hon'ble Lokayukta to request the Government to entrust the enquiry in to the above allegations also to the Special Investigation Team as sought in our earlier letter dated 27.06.2015 referred to at (4) above.

Yours faithfully,

Sd/-
(H.R. Deshapande)
Registrar,
Karnataka Lokayukta,
Bangalore.

Dated: 28.06.2015

ಇದರ ಮಧ್ಯದಲ್ಲಿ ಮಾನ್ಯ ಸದಸ್ಯರಾದ ಶ್ರೀ ವೈ.ಎಸ್.ವಿ. ದತ್ತಾ ಅವರು ಲೋಕಾಯುಕ್ತರಿಂದ ಬಂದ ಒಂದು ಕಾಗದವನ್ನು reference ಮಾಡಿ ಸನದಲ್ಲಿ ಓದಿದರು. ಈಗ ನಾನು ಓದಿದಂತಹ ಎರಡು ಕಾಗದಗಳು ನೇರವಾಗಿ Chief Secretary ಅವರಿಗೆ address ಮಾಡಿರುವಂತಹ ಕಾಗದಗಳಾಗಿರುತ್ತವೆ. ಇದರಲ್ಲಿ ಯಾವುದೇ ರೀತಿಯ doubt ಮಾಡುವಂತಹ ಪ್ರಶ್ನೆಯೇ ಇಲ್ಲ. 27 ಮತ್ತು 28 ರಲ್ಲಿ ಬಂದಿರುವ ಎರಡು ಕಾಗದಗಳು ಬಿಟ್ಟರೆ, ಬೇರೆ ಯಾವುದೇ ಕಾಗದ ಬಂದಿರುವುದಿಲ್ಲ. ಇವರು ಓದಿ ಹೇಳಿದಂತಹ ಕಾಗದ ನಮಗೇನಾದರೂ ಬಂದಿದಯೇ? ಎಂದು ಅನುಮಾನದಿಂದ ಕಡತವನ್ನು ತರಿಸಿ ನೋಡಿದಾಗ ಆ ರೀತಿಯ ಕಾಗದಗಳು ನಮಗೆ ಬಂದಿರುವುದಿಲ್ಲ. ತಾವು ರೆಫರ್ ಮಾಡಿರುವ ಕಾಗದದಲ್ಲಿರುವುದೇನೆಂದರೆ, ಅದರ ಒಂದು ಪ್ಯಾರಾವನ್ನು ಓದಿ ಹೇಳುತ್ತೇನೆ.

Karnataka Lokayukta, M. S. Building, Bangalore. ಈ ಎರಡು ಕಾಗದ ಬರೆದ ಮೇಲೆ 30.06.2015 ಕ್ಕೆ SIT constitute ಆಗಿದೆ.

ನಿಮ್ಮ ಲೆಟರ್ ಏನಿದೆ ಎಂದು ಹೇಳುತ್ತೇನೆ ನೋಡಿ. ಅದರಲ್ಲಿ ಬೇಕಾದರೆ No: Compt/Lokayuktha/BCD/2565/2015, dated: 02.07.2015. Note: There was a publication in the print media dated: 26th and 27th June 2015, alleging that heavy corruption had taken place in the premises of Lokayukta Institution. Therefore, the Lokayukta wrote two letters dated: 27.06.2015 and 28.06.2015 to the Government to constitute any agency to enquiry into the matter. Accordingly, the State Government has constituted Special Investigation Team (SIT) by its Order No. DPAR/83/SLU/2015, dated: 30.06.2015. ಎನ್ನುವುದು ಮೊದಲನೇ ಪ್ಯಾರಾದಲ್ಲಿರುವುದು.

ತಾವು ಓದಿರುವಂಥ letter, ಅದು address ಮಾಡಿರುವಂಥದ್ದು it is by in-charge Registrar, Bangalore Lokayuktha, Bangalore. Addressed to Sri Premshankar Meena, IPS., Additional Director

General of Police, Karnataka Lokayukta, Bangalore ಅವರಿಗೆ ಅಡ್ರೆಸ್ ಮಾಡಿರುವಂಥ ಲೆಟರ್. ಇನ್ನು W.P.No.: 27648/2015, Sri Ashwin Vs. State of Karnataka and others, Division Bench of Hon'ble High Court of Karntaka in the background of two parallel administrative investigations initiated on the orders of Hon'ble Lokayukta and Hon'ble Uplokayukta on the complaints against lokayutka official and taking its cognizance of the fact that on the request of Hon'ble Lokayukta the State Government has acted and appointed a Special Investigating Team for investigation into the allegation of corruption reported by the media as well as corruption alleged by Sri Krishnamurthy, Executive Engineer, Zilla Panchayat, Bangalore Urban passed an order dated: 01.07.2015 to the effect that in order to avoid a conflicting findings, it is appropriate that both Lokayukta and Uplokayukta shall not direct any in-house investigation and they shall wait the report of the Special Investigation Team appointed by the State of Karnataka in this regard. A copy of the said Order dated; 01.07.2015 is kept in the file. Further in the above order Hon'ble high Court has observed as a complaint now is against the officials of the Lokayukta itself as observed by the Lokayukta, it is appropriate and it is conducted by an outside agency. In view of the above facts, even in respect of complaints pertaining to the allegations of corruption, alleged to have been taken place in the premises of the Lokayukta office received or to be received in Lokayukta office in respect of the above matter. We have to await the report of the Special Investigation Team and thereafter take an appropriate decision in the matter. Any violation of the said order of the Hon'ble High Court would amount to contempt of court. In view of the

above, as per the orders of Hon'ble Lokayukta, ADGP is requested to instruct the Lokayukta police not to register the case and not to proceed with the investigation based on such complaints received on administrative side in the office of Lokayukta. The Incharge Registrar."

ಈಗ ಏನಾಗಿದೆಯೆಂದರೆ, ಇದುವರೆಗೂ ಚರ್ಚೆಯಲ್ಲಿ ಬಂದಿರುವುದು, ನೀವು quote ಮಾಡುತ್ತಿರುವಂಥ ರೀತಿಯಲ್ಲಿ, ಅದು 'any agency to enquire matter' ಎಂದು ಇದೆ. ಅದಕ್ಕೋಸ್ಕರ CBI ಮಾಡಬಹುದಾಗಿತ್ತು ಎನ್ನುತ್ತಿದ್ದೀರಿ. ನಾವು ಹೇಳುತ್ತಿರುವುದೇನೆಂದರೆ, ಆ ಪತ್ರವನ್ನು ಅವರು ಬರೆದಿಲ್ಲ, ADGP ಎಂದು ಹೆಸರಿಸಿದ್ದರು, ಆ ಕಾರಣಕ್ಕೋಸ್ಕರ ಅವರ ಸಲಹೆ ಮೇಲೆ ಮಾಡಿದ್ದೇವೆ. ಲೋಕಾಯುಕ್ತ ಆಕ್ಟ್‌ನಲ್ಲಿ ಇರುವುದೇನೆಂದರೆ, ಲೋಕಾಯುಕ್ತ ಆಕ್ಟ್ ಪ್ರಕಾರ ಅವರು ಕೇಳಿದಂಥ ಸಂದರ್ಭದಲ್ಲಿ ಯಾರದ್ದೇ ಸಹಾಯವನ್ನು ಸಹ ನಾವು ಅವರಿಗೆ ಕೊಡಬಹುದು. ಅವರು ಕೇಳಿರುವಂಥದುದ ಯಾವುದೆಂದರೆ ಮೊದಲು Investigation Team ಮಾಡಿ, SIT ಮಾಡಿ ಅಥವಾ ಅದು ಆಗದೇ ಇರುವಂಥ ಸಂದರ್ಭದಲ್ಲಿ Central Government ಸಹ ಮಾಡುವುದಕ್ಕೆ ಬರುತ್ತದೆ. ಅದು ಆಗದೇ ಇರುವಂಥ ಸಂದರ್ಭದಲ್ಲಿ ಏಜೆನ್ಸಿಯನ್ನು ಮಾಡುವುದಕ್ಕೆ ಅವಕಾಶವಿದೆ.

ಅಧ್ಯಕ್ಷರು:– OR any agency.

ಶ್ರೀ ಟಿ.ಬಿ. ಜಯಚಂದ್ರ:– ಆದರೆ, ಅವರು ಬರೆದಿರುವಂಥದ್ದನ್ನು ನಾವು ಒಪ್ಪಿಕೊಂಡಿದ್ದೇವೆ. ಆದರೆ, ನೀವು ಈಗ ಓದಿರುವಂಥ ಕಾಗದ ಕಡತಕ್ಕೆ ಹೋಗಿರುವಂಥ ಹಿನ್ನಲೆಯಲ್ಲಿ ಒಂದು ತಪ್ಪು ಸಂದೇಶ ರವಾನೆಯಾಗುತ್ತದೆ. ಬಹುಶಃ ಇದು ಲೋಕಾಯುಕ್ತರು ಬರೆದಿರುವಂಥ ಕಾಗದ, ಸರ್ಕಾರಕ್ಕೆ ಬರೆದಿರುವಂಥ ಕಾಗದ ಎಂದು ನೀವು ಹೇಳಿದರೂ ಸಹ ಸಂದೇಶ ಏನೆಂದು ಹೋಗುತ್ತದೆಯೆಂದರೆ ಸರ್ಕಾರಕ್ಕೆ ಬರೆದಿರುವ ಕಾಗದ, CBI ನೇ ಮಾಡಬಹುದಾಗಿತ್ತು, ಇವರು ಮಾಡಲಿಲ್ಲ, ಎಲ್ಲೋ ಒಂದು ಕಡೆ

ಇವರು ಮರೆಮಾಚುತ್ತಿದ್ದಾರೆ ಅಥವಾ ಲೋಕಾಯುಕ್ತರಿಗೆ support ಮಾಡುತ್ತಿದ್ದಾರೆ ಎನ್ನುವ ರೀತಿಯಲ್ಲಿ ಚರ್ಚೆಯಾಯಿತು. ಸದ್ಯಕ್ಕೆ ಈ message ಹೋಗೇ ಇರುತ್ತದೆ. ಆ ಕಾರಣಕ್ಕೋಸ್ಕರ ಕಡತ ಸರಿಯಾಗಬೇಕು ಎನ್ನುವ ಕಾರಣಕ್ಕೋಸ್ಕರ ಈ ಪತ್ರವನ್ನು ಓದಿ ಹೇಳುವ ಕೆಲಸವನ್ನು ಮಾಡಿದೆವು. ಆದರೆ, ನನಗೆ ಇದನ್ನು ನೋಡಿದಾಗ, ನೀವು ಕೊಟ್ಟಿರುವ ಲೆಟರ್ ಇದು original letter ಅಲ್ಲ. ಇದರ authenticity ಏನು ಎನ್ನುವುದನ್ನು ನಾವು ಖಚಿತಪಡಿಸಿಕೊಳ್ಳಬೇಕಾಗಿದೆ. ಇದು ರಿಜಿಸ್ಟ್ರಾರ್ ದೇಶಪಾಂಡೆಯವರು ಬರೆದಿರುವಂಥ ಲೆಟರ್. ಇದು in-charge Registrar, signature ಗೂ ಅದಕ್ಕೂ ಒಂದಕ್ಕೊಂದಕ್ಕೆ ಸಂಬಂಧವೇ ಇಲ್ಲ. ನನಗೆ ಎಲ್ಲೋ ಒಂದು ಕಡೆಗೆ I doubt the authenticity of the letter, it is yet to be confirm. So ಅದಕ್ಕೆ ನಾವು ಅದು ಹೌದೋ, ಅಲ್ಲವೋ ಎನ್ನುವುದನ್ನು ಖಚಿತಪಡಿಸಿಕೊಂಡು ಹೇಳುತ್ತೇವೆ. ಆದರೆ, ತಪ್ಪು ಸಂದೇಶ ಹೋಗುವುದು ಬೇಡ. ಇದರಲ್ಲಿ ನಾವು ಸರ್ಕಾರದಿಂದ ಯಾವುದೇ ರೀತಿಯಲ್ಲಿಯೂ ಲೋಕಾಯುಕ್ತರವರು ಕೇಳಿದಂಥ ಏಜೆನ್ಸಿಯನ್ನು ಕೊಟ್ಟಿದ್ದೇವೆಯೇ ವಿನಃ, ಕಾನೂನು ಪ್ರಕಾರ ಇರುವಂಥದ್ದನ್ನು ಕೊಟ್ಟಿದ್ದೇವೆಯೇ ವಿನಃ CBI ಮಾಡುವುದಕ್ಕೆ ಅವಕಾಶವಿಲ್ಲ ಎನ್ನುವುದನ್ನು ತಾವು ಅರ್ಥ ಮಾಡಿಕೊಳ್ಳಬೇಕು. ಆ ಹಿನ್ನೆಲೆಯಲ್ಲಿ ನಾನು clarification ಕೊಡುತ್ತಿದ್ದೇನೆ. ನನಗೆ ಮಾತನಾಡಲು ಅವಕಾಶ ಕೊಟ್ಟದ್ದಕ್ಕಾಗಿ ತಮಗೆ ಧನ್ಯವಾದಗಳನ್ನು ಅರ್ಪಿಸುತ್ತಾ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಸಿದ್ದರಾಮಯ್ಯ (ಮಾನ್ಯ ಮುಖ್ಯಮಂತ್ರಿಗಳು):- ಮಾನ್ಯ ಸಭಾಧ್ಯಕ್ಷರೆ, ಆ ಬಿಲ್ ಬಂದಾಗ ನಾನು ಸದನದಲ್ಲಿ ಇರಲಿಲ್ಲ. ಕೇಂದ್ರದ ಗಣಿ ಮಂತ್ರಿಯವರು ಬಂದಿದ್ದರು, ಅವರ ಜೊತೆಯಲ್ಲಿ ಮೀಟಿಂಗ್ ಇತ್ತು. ಇಲ್ಲಿ ಆ ಬಿಲ್‌ನ ಸಂದರ್ಭದಲ್ಲಿ ಲೋಕಾಯುಕ್ತ ಬಗ್ಗೆ ಒಂದು ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ. ನಿನ್ನೆ ನೀವೇ Joint BAC ಮೀಟಿಂಗ್ ಕರೆದು ಎಲ್ಲಾ ಚರ್ಚೆ ಮಾಡಿದ್ದೀರಿ. Advocate General opinion ನ್ನು ಸಹ ತೆಗೆದುಕೊಂಡಿದ್ದೀರಿ. ಸರ್ಕಾರ ಯಾರನ್ನೂ ರಕ್ಷಣೆ ಮಾಡಬೇಕಾದಂಥ

ಅಗತ್ಯವಿಲ್ಲ. ನಾವು ರಕ್ಷಣೆ ಮಾಡುವುದಕ್ಕೂ ಹೋಗುವುದಿಲ್ಲ. ರಕ್ಷಣೆ ಮಾಡಬೇಕಾದ ಅಗತ್ಯವಿಲ್ಲ. ನಾವು ಕಾನೂನಿನ ಚೌಕಟ್ಟಿನಲ್ಲಿ ಕೆಲಸ ಮಾಡಬೇಕಾಗುತ್ತದೆ. ಕರ್ನಾಟಕ ಲೋಕಾಯುಕ್ತ ಆಕ್ಟ್‌ನಲ್ಲಿ ಎಲ್ಲಿಯೂ ಸಹ suo-moto ಸರ್ಕಾರವೇ ಯಾವುದೇ ಏಜೆನ್ಸಿಗೆ enquiry ಮಾಡಲು ಕೊಡುವುದಕ್ಕೆ ಬರುವುದಿಲ್ಲ. CBIಗಾಗಲಿ ಅಥವಾ ಇನ್ಯಾವುದೇ ಏಜೆನ್ಸಿಗಾಗಲಿ ಕೊಡುವುದಕ್ಕೆ ಬರುವುದಿಲ್ಲ. Section 15 of the Lokayuktha Act ನಲ್ಲಿ ಬಹಳ ಸ್ಪಷ್ಟವಾಗಿ ಹೇಳಿದ್ದಾರೆ. ಲೋಕಾಯುಕ್ತ ನಮಗೆ Special Investigation Team ಮಾಡಿ ಎಂದು ಹೇಳಿದ್ದಾರೆ. ಈಗಾಗಲೇ ದಿನಾಂಕ: 27.06.2015 ರ ಕಾಗದ ಮುಖ್ಯ ಕಾರ್ಯದರ್ಶಿಗಳಿಗೆ ಬರೆದಿರುವಂಥದ್ದು ಮತ್ತು ದಿನಾಂಕ: 28.06.2015ರ ಪತ್ರ ಎರಡನ್ನೂ ಸಹ ಕಾನೂನು ಮಂತ್ರಿಗಳು ಓದಿ ಹೇಳಿದ್ದಾರೆ. Nowhere in those two letter, any enquiry ಎಂದು ಹೇಳಿಲ್ಲ. Specific ಆಗಿ Special Investigatin Team by not less than an Officer of ADGP ಎಂದು ಹೇಳಿದ್ದಾರೆ. ಆ ಪತ್ರ ಬಂದ ತಕ್ಷಣವೇ, 28ನೇ ತಾರೀಖು ಆದ ಮೇಲೆ, 30ನೇ ತಾರೀಖಿಗೆ ನಾವು SIT ಯನ್ನು constitute ಮಾಡಿದ್ದೇವೆ. ಈಗಾಗಲೇ ನೀವು ಯಾವುದೋ ಲೆಟರ್‌ನ್ನು ಓದಿದ್ದೀರಲ್ಲ, that letter is not to the Government. ಅದರ authencitiy is questionable. It's a different thing. Assuring for the argument sake it is a genuine letter, it is not to the Government, ಅದು within the Lokayuktha office itself ಎಂದು ಇರುವಂಥದ್ದು. ಆದ್ದರಿಂದ ನೀವು ಇಲ್ಲಿ, ಏಕೆ ಇದನ್ನು ಪ್ರಸ್ತಾಪ ಮಾಡುತ್ತಿದ್ದೇವೆಂದರೆ wrong message ಸಾರ್ವಜನಿಕರಿಗೆ ಹೋಗಬಾರದು. ಇದು record ನಲ್ಲಿ ಸಹ ಅದೇ ಆಗಿದೆ. ತಪ್ಪು ಸಂದೇಶ ಹೋಗಬಾರದು ಎನ್ನುವ ಕಾರಣಕ್ಕೋಸ್ಕರವಾಗಿ ಈ ವಿವರಣೆಯನ್ನು ಕೊಡುತ್ತಿರುವುದು. ಆ ಎರಡೂ ಲೆಟರ್ ಬಿಟ್ಟರೆ ಇನ್ಯಾವ ಲೆಟರ್ ಸಹ ಸರ್ಕಾರಕ್ಕೆ ಬಂದಿಲ್ಲ. Section 15 of the Lokayuktha Act ನಲ್ಲಿ ಅವರು ಬೇಕಾದರೆ ರಾಜ್ಯ ಸರ್ಕಾರಕ್ಕಾದರೂ ಬರೆಯಬಹುದು ಅಥವಾ ಕೇಂದ್ರ ಸರ್ಕಾರಕ್ಕೂ ಬರೆಯಬಹುದು, ಕೇಂದ್ರ ಸರ್ಕಾರದ ಅಧಿಕಾರಿಗಳನ್ನು ಬಳಸಿಕೊಳ್ಳಬಹುದು ಅಥವಾ ರಾಜ್ಯ ಸರ್ಕಾರದ ಅಧಿಕಾರಿಗಳನ್ನು

ಬಳಸಿಕೊಳ್ಳಬಹುದು. ಇದು ಸೆಕ್ಷನ್ 15 ರಲ್ಲಿ ಬಹಳ ಸ್ಪಷ್ಟವಾಗಿದೆ. ಅದರಿಂದ ತಪ್ಪು ಮಾಹಿತಿ ಆಗುತ್ತಿದೆ. ಸಿದ್ದರಾಮಯ್ಯನವರ ಮೇಲೆ ಯಾವುದೋ ಒಂದು petition ಇದೆ. ಅದಕ್ಕೋಸ್ಕರ ಅವರನ್ನು ರಕ್ಷಣೆ ಮಾಡಲು ಹೊರಟಿದ್ದಾರೆ ಎನ್ನುವುದು ಸರಿಯಲ್ಲ. ನನ್ನ ಮೇಲೆ ಕೆಂಪಣ್ಣ ಅವರ ಆಯೋಗ ರಚನೆ ಮಾಡಿ ಆಗಿದೆ. ಅದಕ್ಕೆ ಸಂಬಂಧಪಟ್ಟಂತೆ ಯಾರೋ ಒಬ್ಬರು ಒಂದು petition ಕೊಟ್ಟಿದ್ದಾರೆ. ಅದಕ್ಕೆ ನನಗೆ ನಿಮ್ಮ response ಏನೆಂದು ಕೇಳಿದರು. ನಾನು ಅದಕ್ಕೆ ನಮ್ಮ reply ಕೊಟ್ಟಿದ್ದೇವೆ. ಅದಿನ್ನೂ ಆ ಹಂತದಲ್ಲಿದೆ. Reply ಕೊಟ್ಟಿದ್ದೇವೆ. ಆಮೇಲೆ ಅವರಿಗೆ documents ಕೊಡಿ ಎಂದು ಹೇಳಿದ್ದರು. ಅದು ಅಷ್ಟರಲ್ಲಿದೆ ಅದಕ್ಕೂ, ಇದಕ್ಕೂ ಸಂಬಂಧವಿಲ್ಲ. ನಾನು ಮೊನ್ನೆಯೂ ಹೇಳಿದೆ. ಮತ್ತೆ ಜಗದೀಶ್ ಶೆಟ್ಟರ್ ರವರು ಪ್ರಸ್ತಾಪ ಮಾಡಿದರು ಎನಿಸುತ್ತದೆ. ಅದಕ್ಕೂ–ಇದಕ್ಕೂ ಸಂಬಂಧವಿಲ್ಲ. Let the law takes its own course. ಅದನ್ನು ಒಂದು ಕಾರಣವಾಗಿಟ್ಟುಕೊಂಡು ನಾನು ಆ ಕಾರಣಕ್ಕೋಸ್ಕರವಾಗಿ ಅವರಿಗೆ ಬೆಂಬಲ ಕೊಡಲು, ರಕ್ಷಣೆ ಕೊಡಲು ಹೊರಟಿದ್ದೇವೆಂದು ಊಹೆ ಮಾಡಿಕೊಳ್ಳುವುದು ಇದೆಯಲ್ಲ, ಅದು ಆಧಾರ ರಹಿತವಾದುದು, ಇವರು ದುರುದ್ದೇಶದಿಂದ ಆ ಮಾತನ್ನು ಹೇಳಲು ಪ್ರಾರಂಭ ಮಾಡಿದ್ದಾರೆ.

ಶ್ರೀ ಜಗದೀಶ ಶೆಟ್ಟರ್ (ಮಾನ್ಯ ವಿರೋಧ ಪಕ್ಷದ ನಾಯಕರು):– ಮಾನ್ಯ ಅಧ್ಯಕ್ಷರೆ, 12 ತಾರೀಖಿಗೆ ಅವಕಾಶ ಕೊಡುವುದಾಗಿ ತಾವು ಹೇಳಿದ್ದೀರಿ. ಆಗ ನಾನು ಇದರ ಬಗ್ಗೆ detail ಆಗಿ ಯಾವ ರೀತಿ ದುರುದ್ದೇಶವಿದೆ, ಯಾವ ರೀತಿ ಪರಸ್ಪರ ರಕ್ಷಣೆ ಮಾಡುತ್ತಿದ್ದಾರೆ ಎಂಬುದನ್ನು detail ಆಗಿ ಚರ್ಚೆ ಮಾಡುತ್ತೇನೆ. ಮಾನ್ಯ ಅಧ್ಯಕ್ಷರು ಅದಕ್ಕೆ permission ಕೊಡುತ್ತೇವೆಂದು ಹೇಳಿದ್ದಾರೆ. detail ಆಗಿ ಚರ್ಚೆ ಮಾಡುತ್ತೇವೆ. ಏನೇನು ಪರಸ್ಪರ ಯಾವ ರೀತಿ ರಕ್ಷಣೆಯಾಗುತ್ತಿದೆ ಎಂದು detail ಚರ್ಚೆ ಮಾಡುತ್ತೇವೆ.

ಶ್ರೀ ಸಿದ್ದರಾಮಯ್ಯ:– ಕುಳಿತುಕೊಳ್ಳಿ. ಯಾರೂ ರಕ್ಷಣೆ ಮಾಡಬೇಕಾದ ಅಗತ್ಯವಿಲ್ಲ. ನಮಗೇಕೆ ರಕ್ಷಣೆ ಮಾಡಿಕೊಳ್ಳಬೇಕು? ನಾವ್ಯಾಕೆ ರಕ್ಷಣೆ ಮಾಡಿಕೊಳ್ಳಬೇಕು. ಏನಾದರೂ ಇದ್ದರಲ್ಲವೆ ರಕ್ಷಣೆ ಮಾಡಿಕೊಳ್ಳುವುದಕ್ಕೆ.

ಶ್ರೀ ಜಗದೀಶ್ ಶೆಟ್ಟರ್:– ಮಾಡುತ್ತೀದ್ದೀರಿ. ಒಂದು amendment ತನ್ನಿ ಎಂದು ನಾನು ಮೊನ್ನೆ ಹೇಳಿದೆ. ಇವೆಲ್ಲಾ ನೋಡಿದರೆ. . .ಇನ್ನೂ SIT ಗೆ ಅಧಿಕಾರವೇ ಕೊಟ್ಟಿಲ್ಲ. ಇನ್ನೂ investigation ಪ್ರಾರಂಭವಾಗಿಲ್ಲ. SIT ಗೆ ಎಲ್ಲಿ ಅಧಿಕಾರ ಕೊಟ್ಟಿದ್ದೀರಿ? ಅದನ್ನು ಒಂದು police station ಎಂದು declare ಮಾಡಿಲ್ಲ. ಯಾವಾಗ ಪ್ರಾರಂಭವಾಗಿದೆ? ಅವರು ಇನ್ನೂ ಒಂದು ಹೆಜ್ಜೆಯನ್ನೂ ಮುಂದೆ ಇಟ್ಟಿಲ್ಲ.

ಶ್ರೀ ಸಿದ್ದರಾಮಯ್ಯ:– ಎಲ್ಲಾ ಆಯಿತು. ಸ್ವಲ್ಪ ಕೇಳ್ರಿ. ಮಾನ್ಯ ಅಧ್ಯಕ್ಷರೆ, ಮಧ್ಯದಲ್ಲಿ ಇವರು . . . ನಾನಿನ್ನೂ ಮುಗಿಸಿಲ್ಲ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್:– ಇನ್ನೂ ಏನನ್ನೂ ಮಾಡಿಲ್ಲ.

(ಗೊಂದಲ)

ಶ್ರೀ ಸಿದ್ದರಾಮಯ್ಯ:– ನಿಮಗೆ ಎರಡು ವರ್ಷದಿಂದ ಏನೂ ಸಿಗಲಿಲ್ಲ.

ಶ್ರೀ ಜಗದೀಶ್ ಶೆಟ್ಟರ್:– ಎಲ್ಲಾ ಸಿಕ್ಕಿದೆ.

ಅಧ್ಯಕ್ಷರು:– ಅದ್ಯಾಕೆ ಬೇಕು ಬಿಡಿ.

ಶ್ರೀ ಸಿದ್ದರಾಮಯ್ಯ:– ಇವರಿಗೆ ಏನೂ ಸಿಗಲಿಲ್ಲ. ಯಾವುದೋ ಒಂದು ವಿಷಯವನ್ನು ಹಿಡಿದುಕೊಂಡು ಅದನ್ನು ಜಗ್ಗಿಸುವ ಪ್ರಯತ್ನ ಮಾಡುತ್ತಿದ್ದಾರೆ. ನಾವ್ಯಾಕೆ ಯಾರನ್ನಾದರೂ ರಕ್ಷಣೆ ಮಾಡಲು ಹೋಗಬೇಕು? ಒಂದು ವೇಳೆ ಆ ರೀತಿ any investigation ಎಂದು letter ಬಂದಿದ್ದರೆ the next moment ನಾವು ಅದನ್ನು ಮಾಡುತ್ತಿದ್ದೆವು. Why should I protect anybody? ಎಲ್ಲಿದೆ ತೋರಿಸಿ? Under the Lokayukta Act. ಸಿ.ಬಿ.ಐ. ಗೆ ಕೊಡುವುದಕ್ಕೆ ಸರ್ಕಾರಕ್ಕೆ ಅಧಿಕಾರ ಇದೆ ಎಂಬುದು

ಎಲ್ಲಿದೆ ತೋರಿಸಿ. Act ನಲ್ಲಿ ಅಂತಹ Provision ಎಲ್ಲಿದೆ? Suo motto we cannot. We cannot interfere with the function of the Lokayukta. ಅದ್ಯಾವುದೋ ಒಬ್ಬರು In-charge Registrar ರವರು ADGP ಲೋಕಾಯುಕ್ತ ಪೊಲೀಸರಿಗೆ ಬರೆದಿರುವುದನ್ನು ಹೇಳಿಕೊಂಡು. . . ಅದಕ್ಕೂ, ಸರ್ಕಾರಕ್ಕೂ ಏನು ಸಂಬಂಧವಿದೆ? ಅವರು ಸರ್ಕಾರಕ್ಕೆ ಪತ್ರ ಬರೆದಿದ್ದಾರೆಯೇ? ಅದರ ಮೆಲೆ ಇವರು ಸಿ.ಬಿ.ಐ. ಗೆ ಕೊಡಬೇಕಿತ್ತು, ಸಿ.ಬಿ.ಐ. ಗೆ ಕೊಡಬೇಕಿತ್ತು. . . .

ಶ್ರೀ ಟಿ.ಬಿ. ಜಯಚಂದ್ರ:– ಇದೇ ಲೆಟರ್ ಹೊರಗಡೆ circulation ನಲ್ಲಿರುವುದು, ಇದರ ಮೇಲೆಯೇ ಚರ್ಚೆಗಳು ನಡೆಯುತ್ತಿರುವುದು.

ಶ್ರೀ ಸಿದ್ದರಾಮಯ್ಯ:– This is the very letter ದೇಶದ ತುಂಬಾ circulation ನಲ್ಲಿರುವುದು. ಅದರ ಮೇಲೆ ಚರ್ಚೆಗಳು ನಡೆಯುತ್ತಿರುವುದು.

ಅಧ್ಯಕ್ಷರು:– ಆ letter ಲೋಕಾಯುಕ್ತದೊಳಗೆ ಓಡಾಡುತ್ತಿದೆಯಲ್ಲ, ಅದೇ ಲೋಕಾಯುಕ್ತ ಸಿ.ಬಿ.ಐ. ಗೆ ಕಳುಹಿಸಿರಿ ಎಂದು ನಿಮಗೆ ಪತ್ರ ಬರೆಯಬಹುದಿತ್ತಲ್ಲ?

ಶ್ರೀ ಸಿದ್ದರಾಮಯ್ಯ:– Section-15 of the Lokayuktha Act ಏನು ಹೇಳುತ್ತದೆ? Any officer, investigating agency of the state Government or any officer as investigating agency of the Central Government with the prior concurrence of that Government. Any other agency ಇದನ್ನು ಬರೆಯಬಹುದಾಗಿತ್ತಲ್ಲ? ನಮಗೆ SIT ಮಾಡಿ ಎಂದು ಬರೆದಿದ್ದಾರೆ. ನಾವು SIT constitute ಮಾಡಿದ್ದೇವೆ. SITconstitute ಮಾಡಿ, ಕಮಲ್‌ಪಂತ್‌ರವರು ಏನು ಕೇಳಿದ್ದಾರೆ, ಅದನ್ನು ಕೂಡಾ ನಾವು ಕೊಟ್ಟು ಆಗಿದೆ. ಅವರೇನು requirements ಕೇಳಿದ್ದಾರೆ, ಅದನ್ನು ಕೂಡಾ ಕೊಟ್ಟು ಆಗಿದೆ.

ಶ್ರೀ ಬಸವರಾಜ ಬೊಮ್ಮಾಯಿ (ಶಿಗ್ಗಾಂವಿ):– One second sir, ನೀವು ಹೇಳಿದ್ದನ್ನು ಒಪ್ಪಿಕೊಳ್ಳೋಣ. ಅದು internal communication between the I/C Registrar to the ADGP of Lokayukta, ನಿಮ್ಮ ಸರ್ಕಾರಕ್ಕೆ

ಬರೆದಿಲ್ಲ, ಒಪ್ಪಿಕೊಳ್ಳೋಣ. ಈಗ ಅದರ ಅರ್ಥವೇನೆಂದರೆ I/C ಇದ್ದವರು ಲೋಕಾಯುಕ್ತರನ್ನು consult ಮಾಡದೆ ಬರೆಯಲು ಸಾಧ್ಯವಿಲ್ಲ.

ಶ್ರೀ ಸಿದ್ದರಾಮಯ್ಯ:– We do not know.

ಶ್ರೀ ಬಸವರಾಜ ಬೊಮ್ಮಾಯಿ:– ಒಂದು ನಿಮಿಷ ಸರ್. ಅಲ್ಲ, ಒಬ್ಬ Registrar who is working under Lokayutka without his consent he cannot write. So that is the mind of Lokayukta initially. Subsequently, Lokayukta change his mind.

ಶ್ರೀ ಸಿದ್ದರಾಮಯ್ಯ:– No that is not relevant.

(ಗೊಂದಲ)

ಶ್ರೀ ಆರ್.ವಿ. ದೇಶಪಾಂಡೆ:– That is on 2nd July . . .

(ಗೊಂದಲ)

ಶ್ರೀ ಬಸವರಾಜ ಬೊಮ್ಮಾಯಿ:– Subsequently the Lokayukta changed his mind.

(ಗೊಂದಲ)

ಶ್ರೀ ಸಿದ್ದರಾಮಯ್ಯ:– That is on 2nd July. After the SIT is constituted.

(ಗೊಂದಲ)

ಶ್ರೀ ಬಸವರಾಜ ಬೊಮ್ಮಾಯಿ:– ಇದರ ಅರ್ಥವೇನೆಂದರೆ, ಮೊದಲು ಲೋಕಯುಕ್ತ ಸಿ.ಬಿ.ಐ. ಯನ್ನು propose ಮಾಡಿದರು. ಆಮೇಲೆ ಅವರು mind change ಮಾಡಲು ಕಾರಣವೇನು?

(ಗೊಂದಲ)

Sri Krishna Byregowda:- Sir, We are not answerable for Lokayukta. We are not entitled to answer. ಅದಕ್ಕೆ ಮುಖ್ಯಮಂತ್ರಿಗಳು ಹೇಗೆ ಉತ್ತರ ಕೊಡಲು ಸಾಧ್ಯ? ಸಭಾಧ್ಯಕ್ಷರೆ, ಇವರು ಏನು ಕೇಳುತ್ತಿದ್ದಾರೆ?

(ಗೊಂದಲ)

ಶ್ರೀ ಬಸವರಾಜ ಬೊಮ್ಮಾಯಿ:- ಯಾರ ಒತ್ತಡಕ್ಕೆ ಲೋಕಾಯುಕ್ತ change ಆಗಿದ್ದಾರೆ? ಎನ್ನುವ ಮೂಲಭೂತ ಪ್ರಶ್ನೆ ಬರುತ್ತದೆ.

(ಗೊಂದಲ)

ಅಧ್ಯಕ್ಷರು:- ಒಂದು ನಿಮಿಷ, ಬೊಮ್ಮಾಯಿ, ಜಾರ್ಜ್ ಕೇಳಿ. ಮಾನ್ಯ ಮುಖ್ಯಮಂತ್ರಿಗಳು ಈಗಾಗಲೇ ಪ್ರಸ್ತಾಪ ಮಾಡಿರುವ ರೀತಿಯಲ್ಲಿ ಲೋಕಾಯುಕ್ತ ಈಗಲೂ ಕೂಡಾ ಸಿ.ಬಿ.ಐ. ಗೆ ಬರೆಯಿರಿ ಎಂದು ರಾಜ್ಯ ಸರ್ಕಾರಕ್ಕೆ ಹೇಳಿದರೆ ಕೊಡುತ್ತೇವೆಂದು ಹೇಳುತ್ತಾರಲ್ಲ. ಅದಕ್ಕೆ ಈ ಸದನದ ಭಾವನೆಯನ್ನು ಲೋಕಾಯುಕ್ತ ಗಮನಿಸಿದರೆ, ಪುನಃ ಒಂದು ಲೆಟರ್ ಬರೆದು. . .

(ಗೊಂದಲ)

ಶ್ರೀ ಕೆ.ಎಂ. ಶಿವಲಿಂಗೇಗೌಡ:- ಲೋಕಾಯುಕ್ತ ಕೆಟ್ಟು ಹೋಗಿದೆ ಬಿಡಿ. Totally ಲೋಕಾಯುಕ್ತ ಅವ್ಯವಸ್ಥಿತವಾಗಿದೆ. ಲೋಕಾಯುಕ್ತವನ್ನು ಏನು ಮಾಡಬೇಕೆಂದು ಚರ್ಚೆ ಮಾಡಿ. ಯಾರು ಬೇಕೋ ಅವರೇ ಲೆಟರ್ ಬರೆಯುತ್ತಾರೆ. ಯಾರ ಹಿಡಿತವೂ ಇಲ್ಲ. ಯಾರಿಗೆ ಬೇಕಾದರೂ ಲೆಟರ್ ಬರೆಯುತ್ತಾರೆ. ಬರಿ ಸುಳ್ಳು ಲೆಟರನ್ನೇ ಬರೆಯುತ್ತಾರೆ.

(ಗೊಂದಲ)

ಶ್ರೀ ಬಸವರಾಜ ಬೊಮ್ಮಾಯಿ:- SIT ಗೆ change ಮಾಡಿದ್ದಾರೆ. ಅವರ ಅಭಿಪ್ರಾಯಗಳೆಲ್ಲವೂ ಬದಲಾಗಿದೆ. ಏಕೆ ಬದಲಾಗಿದೆ? ಯಾರ ಒತ್ತಡಕ್ಕೆ ಬದಲಾಗಿದೆ ಎಂಬುದು ಮೂಲಭೂತ ಪ್ರಶ್ನೆ.

ಶ್ರೀ ಟಿ.ಬಿ. ಜಯಚಂದ್ರ:- Based on High court judgment. . . .

(ಗೊಂದಲ)

ಶ್ರೀ ಕೃಷ್ಣ ಬೈರೇಗೌಡ:– ಇದು ಅವರ internal problem, ಮಾನ್ಯ ಅಧ್ಯಕ್ಷರೆ, ಅದರ ಬಗ್ಗೆ ಚರ್ಚೆ ಮಾಡುವಂತಿಲ್ಲ. ಸರ್ಕಾರದ ಬದ್ಧತೆ ಏನಿದೆ ಅದರ ಬಗ್ಗೆ ಚರ್ಚೆಯಾಗಲಿ. ಅವರ issue ಅದು, internal. ಅದರ ಬಗ್ಗೆ ಚರ್ಚೆ ಮಾಡಲು ಇಲ್ಲಿ ಸಭೆ ಇಲ್ಲ. ಸರ್ಕಾರದ ವಿಷಯದ ಕುರಿತು ಚರ್ಚೆಯಾಗಲಿ.

(ಗೊಂದಲ)

ಶ್ರೀ ಸಿದ್ದರಾಮಯ್ಯ:– ಅವರು ಆಂತರಿಕವಾಗಿ ಬರೆದುಕೊಂಡಿದ್ದಾರೆ ಎಂದು ಇವರು ವಾದ ಮಾಡುವುದು. It is most irrelevant argument.

(ಗೊಂದಲ)

ಶ್ರೀ ಬಸವರಾಜ ಬೊಮ್ಮಾಯಿ:– ಅದನ್ನು ಏಕೆ doubt ಮಾಡುತ್ತೀರಿ?

(ಗೊಂದಲ)

ಶ್ರೀ ಟಿ.ಬಿ. ಜಯಚಂದ್ರ:– This is a Xerox. ನಾವು ಇಷ್ಟರವರೆಗೆ ಓದಿದ್ದು original letter received from the lokayukta.

(ಗೊಂದಲ)

ಶ್ರೀ ಸಿದ್ದರಾಮಯ್ಯ:– ಮಾನ್ಯ ಅಧ್ಯಕ್ಷರೆ, ಎರಡು ಪತ್ರಗಳು ಬಂದಿವೆ. ಎರಡು ಲೆಟರ್ ಬಿಟ್ಟರೆ ಇನ್ಯಾವುದೇ ಪತ್ರ ಬಂದಿಲ್ಲ. ಆ ಎರಡು letter ನಲ್ಲಿ any agency ಎಂದು ಬರೆದಿಲ್ಲ. ಅವರು specific ಆಗಿ Special Investigating Team ನಿಂದ ಮಾಡಿಸಿ ಎಂದು ಬರೆದಿದ್ದಾರೆ. ಆ ರೀತಿ request ಮಾಡಿರುವುದರಿಂದ ನಾವು SIT ಯನ್ನು 30ನೇ ತಾರೀಖಿಗೆ constitute ಮಾಡಿದ್ದೇವೆ. ಅವರು 28ನೇ ತಾರೀಖು ಪತ್ರ ಬರೆದಿದ್ದಾರೆ. ಅವರಿಗೆ ಬೇಕಾದೆಲ್ಲವನ್ನೂ ನಾವು ಕೊಟ್ಟಿದ್ದೇವೆ. ಅದರಿಂದ ಇವರು ಸುತ್ತಿ ಬಳಸಿ, ಸರ್ಕಾರದ ಮೇಲೆ ಗೂಬೆ ಕೂರಿಸುವ ಪ್ರಯತ್ನ ಮಾಡುತ್ತಿದ್ದಾರಲ್ಲ,

ಇದು ದುರುದ್ದೇಶದಿಂದ, ರಾಜಕೀಯ ಪ್ರಚಾರಕ್ಕೋಸ್ಕರ ಮಾಡುತ್ತಿರುವ ಒಂದು ಷಡ್ಯಂತ್ರ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್:– ಮಾನ್ಯ ಅಧ್ಯಕ್ಷರೆ, ನೀವು ಅವಕಾಶ ಕೊಟ್ಟರೆ ಇನ್ನೂ detail ಆಗಿ ಚರ್ಚೆ ಮಾಡುತ್ತೇವೆ.

ಅಧ್ಯಕ್ಷರು:– ಬೇಡ, ಬೇಡ.

(ಗೊಂದಲ)

ಶ್ರೀ ಸಿದ್ದರಾಮಯ್ಯ:– ಈ ರಾಜಕೀಯ ಷಡ್ಯಂತ್ರಕ್ಕೆ ನಾವು ಬಗ್ಗಲ್ಲ, ನಮ್ಮ ಸರ್ಕಾರ ಇದಕ್ಕೆಲ್ಲಾ ಸೊಪ್ಪು ಹಾಕುವುದಿಲ್ಲ. ಇದರಲ್ಲಿ ಯಾವುದೇ ಸತ್ಯ ಇಲ್ಲ ಎಂದು ಬಹಳ ಸ್ಪಷ್ಟವಾಗಿ ಹೇಳುವುದಕ್ಕೆ ಬಯಸುತ್ತೇನೆ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್:– ಇವರ ಸರ್ಕಾರದ ಅಸಹಾಯಕತೆಯಿಂದ ಲೋಕಾಯುಕ್ತ ಸಂಸ್ಥೆ ಇನ್ನೂ ಭ್ರಷ್ಟವಾಗುತ್ತಿದೆ. ಲೋಕಾಯುಕ್ತ ಸಂಸ್ಥೆಯನ್ನು ಇನ್ನೂ weak ಮಾಡುತ್ತಿದ್ದಾರೆ. ಇನ್ನೂ ಭ್ರಷ್ಟವಾಗುತ್ತಿದೆ.

(ಗೊಂದಲ)

ಶ್ರೀ ಆರ್.ವಿ. ದೇಶಪಾಂಡೆ:– ಈ ಮಾತನ್ನು ನೀವು consider ಮಾಡಬೇಕು.

(ಗೊಂದಲ)

ಅಧ್ಯಕ್ಷರು:– ಈಗ ಪ್ರಶ್ನೋತ್ತರ.

(ಗೊಂದಲ)

ಶ್ರೀ ವೈ.ಎಸ್.ವಿ. ದತ್ತಾ:– ಮಾನ್ಯ ಅಧ್ಯಕ್ಷರೆ, ನಾನು ಚರ್ಚೆಯನ್ನು ...

(ಗೊಂದಲ)

ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್:– ಮಾನ್ಯ ಅಧ್ಯಕ್ಷರೆ, ಈಗಾಗಲೇ ಬೇಡಿಕೆ ಮೇಲೆ ಚರ್ಚೆಯಾಗಿದೆ. ಇವತ್ತು ಇದು ಮುಗಿದು ಹೋಗಲಿ. ನಾಳೆಯಿಂದ Article 371 (J) ಮತ್ತು ನಂಜುಂಡಪ್ಪ ವರದಿಗೆ ಚರ್ಚೆ ಸೀಮಿತ ಮಾಡಿದ್ದೀರಿ.

ಶ್ರೀ ವೈ.ಎಸ್.ವಿ. ದತ್ತಾ:– ಮಾನ್ಯ ಅಧ್ಯಕ್ಷರೆ, ನನ್ನ ಹೆಸರನ್ನು ಉಲ್ಲೇಖ ಮಾಡಿದ್ದಾರೆ. ನಾನು ಓದಿರುವ ಪತ್ರ . . . (ಗೊಂದಲ) . . . ಒಂದು ನಿಮಿಷ ನಾನು ಮಾತನಾಡಬೇಕೋ, ಬೇಡವೋ?

ಅಧ್ಯಕ್ಷರು:– ಆಯಿತು, ಮಾತನಾಡಿಕೊಳ್ಳುತ್ತಲೇ ಕೂತುಕೊಳ್ಳಿ.

ಶ್ರೀ ವೈ.ಎಸ್.ವಿ. ದತ್ತಾ:– ನಾನು ಹೇಳುತ್ತಿರುವುದು ಏನೆಂದರೆ, ಈಗ ಸರ್ಕಾರ ಬಹಳ ಸ್ಪಷ್ಟವಾಗಿ ಲೋಕಾಯುಕ್ತರು ನಮಗೆ ದಿನಾಂಕ: 27 ಮತ್ತು 28 ನೇ ತಾರೀಖಿನಂದು ಬರೆದಿರುವ ಎರಡು ಪತ್ರಗಳಲ್ಲಿ ಅವರು ಎಲ್ಲಿಯೂ ಕೂಡ any agency ಎಂದು ಹೇಳಿಲ್ಲ, ನಿರ್ದಿಷ್ಟವಾಗಿ SIT ಮಾಡಬೇಕೆಂದು ಹೇಳಿದ್ದಾರೆ ಎಂದು ಹೇಳಿದೆ. ನಾನು ಓದಿರುವ ಪತ್ರದ genuineness, ಅದರ ಸಾಚಾತನವನ್ನು ಸರ್ಕಾರ ಪತ್ತೆ ಮಾಡಿಕೊಳ್ಳಲಿ, ನನ್ನದೇನು ತಕರಾರು ಇಲ್ಲ. ಆದರೆ ನಾನು ಓದಿರುವ ಪತ್ರನೂ ಕೂಡ ಒಂದು correspondence pertaining to this enquiry.

(ಗೊಂದಲ)

ಒಬ್ಬ ಮಾನ್ಯ ಸದಸ್ಯರು:– ಅದು ಇಂಟರ್ನಲ್ ಆಗಿದೆ. ಅದರ ಬಗ್ಗೆ ನಾವ್ಯಾಕೆ ಇಲ್ಲಿ ಮಾತನಾಡಬೇಕು?

(ಗೊಂದಲ)

ಶ್ರೀ ಆರ್.ವಿ. ದೇಶಪಾಂಡೆ (ಉನ್ನತ ಶಿಕ್ಷಣ ಸಚಿವರು):– .... ಅದನ್ನು discuss ಮಾಡಬೇಕು. ಯಾರು ಯಾರಿಗೆ ಬರೆದಿದ್ದಾರೆ ನೋಡಿ ಹೇಳಿ, ಇವರು ಹೌಸ್‌ಗೆ mislead ಮಾಡುತ್ತಿದ್ದಾರೆ. You are misleading the

House. Within the lokayuktha correspondence ಆಗಿದೆ. How are we responsible?

(ಗೊಂದಲ)

ಶ್ರೀ ಕೃಷ್ಣ ಬೈರೇಗೌಡ (ಕೃಷಿ ಸಚಿವರು):– ಇವರಿಗೆ ಬೇರೆ ಸಂದರ್ಭದಲ್ಲಿ ಎಲ್ಲಾ ತಿಳಿಯುತ್ತದೆ, ಈ ಸಂದರ್ಭದಲ್ಲಿ ಏಕೆ ತಿಳಿಯುವುದಿಲ್ಲ? ಲೋಕಾಯುಕ್ತ ಸಂವಿಧಾನಿಕ ಸಂಸ್ಥೆ, ಪ್ರತ್ಯೇಕವಾಗಿರುವುದು, ಅದು ಸರ್ಕಾರದ ಅಡಿಯಲ್ಲಿಲ್ಲ, ತಮಗೆ ಅದು ಏಕೆ ಗೊತ್ತಾಗುವುದಿಲ್ಲ?

(ಗೊಂದಲ)

ಶ್ರೀ ಎನ್.ಹೆಚ್. ಕೋನರಡ್ಡಿ:– ಅವರಿಗೆ ಹೇಳುವುದಕ್ಕೆ ಬಿಡಿ. ಎಲ್ಲರೂ ಎದ್ದು ನಿಂತು ಮಾತನಾಡಿದರೆ ಹೇಗೆ?

(ಗೊಂದಲ)

ಶ್ರೀ ವೈ.ಎಸ್.ವಿ. ದತ್ತಾ:– ಸೋಮವಾರ ಹೇಗೂ ಚರ್ಚೆ ಮಾಡಲು ಅವಕಾಶವಿದೆ, ಚರ್ಚೆ ಮಾಡೋಣ.

(ಗೊಂದಲ)

ಶ್ರೀ ಆರ್.ವಿ. ದೇಶಪಾಂಡೆ (ಉನ್ನತ ಶಿಕ್ಷಣ ಸಚಿವರು):– ನೀವು ಈಗ authenticity check ಮಾಡಿ ಎಂದು ಹೇಳಿದಿರಿ. If it is a false letter, you will be help responsible. Within the lokayuktha ಬಹಳಷ್ಟು discussion ಆಗಿದೆ. How are we responsible?

(ಗೊಂದಲ)

ಶ್ರೀ ಕೃಷ್ಣ ಬೈರೇಗೌಡ (ಕೃಷಿ ಸಚಿವರು):– ಇವರು ಈ ರೀತಿ ಮಾತನಾಡಿದರೆ, ನೋಡಿದವರು ಹೇಗೇಗೋ ತಿಳಿದುಕೊಳ್ಳುತ್ತಾರೆ, ದಯವಿಟ್ಟು ಇವರಿಗೆ ಕುಳಿತುಕೊಳ್ಳಲು ಹೇಳಿ.

(ಗೊಂದಲ)

ಅಧ್ಯಕ್ಷರು:– ದತ್ತಾರವರೆ, ಸಾಕು, ದಯವಿಟ್ಟು ಕುಳಿತುಕೊಳ್ಳಿ, ಈಗ ಸಹಕಾರಿ ಮಂತ್ರಿಗಳು ಬೇಡಿಕೆ ಮೇಲಿನ ಚರ್ಚೆಗೆ ಉತ್ತರ ಹೇಳುವುದಿದ್ದರೆ ಹೇಳಿ.

ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್:– ಮಾನ್ಯ ಅಧ್ಯಕ್ಷರೆ, ಸಹಕಾರ ಇಲಾಖೆಯ ಬೇಡಿಕೆಗಳ ಬಗ್ಗೆ ನಡೆದಂತಹ ಚರ್ಚೆಯಲ್ಲಿ ಲಕ್ಷ್ಮಣ್ ಸವದಿಯವರು..

(ಗೊಂದಲ)

ಅಧ್ಯಕ್ಷರು:– ಬೆಳಿಗ್ಗೆ 10 ಗಂಟೆಗೆ ಉತ್ತರ ಕೊಡುತ್ತೀರಾ?

ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್:– ಬೆಳಿಗ್ಗೆ ಒಂದು ಕಾರ್ಯಕ್ರಮ ಇದೆ. ಸಿ.ಎಂ. ಅವರನ್ನು ಕರೆದುಕೊಂಡು ಹೋಗುತ್ತಿದ್ದೇವೆ.

(ಗೊಂದಲ)

ಶ್ರೀ ಸಿ.ಎನ್. ಬಾಲಕೃಷ್ಣ:– ಮಾನ್ಯ ಅಧ್ಯಕ್ಷರೆ, ನಾಳೆ 7.30 ಗೆಲ್ಲಾ ಹುಬ್ಬಳ್ಳಿಗೆ ಹೋಗಬೇಕು, ನಾಳೆ ವಿವರವಾಗಿ ಸ್ಪಷ್ಟೀಕರಣ ಮಾಡುವುದಕ್ಕಾಗುತ್ತದೆ, ನಾಳೆ ಉತ್ತರ ಕೊಟ್ಟರೆ ಒಳ್ಳೆಯದು.

(ಗೊಂದಲ)

ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್:– ಹೆಚ್ಚಿಗೆ ಸಮಯವನ್ನು ತೆಗೆದುಕೊಳ್ಳುವುದಿಲ್ಲ. ಬೇಗನೆ ಮುಗಿಸಿಬಿಡುತ್ತೇನೆ.

ಶ್ರೀ ಡಿ.ಎನ್. ಜೀವರಾಜ್:– ಅಧ್ಯಕ್ಷರೆ, ನಾಳೆ ಹೇಗೂ ಪಾಸ್ ಆಗುತ್ತದೆ. ನಾಳೆ ಅರ್ಧ ಅಥವಾ ಒಂದು ಗಂಟೆಯಲ್ಲಿ ಮುಗಿಯುತ್ತದೆ, ಉತ್ತರ ಕೊಡಲಿ.

ಶ್ರೀ ವೈ.ಎಸ್.ವಿ. ದತ್ತಾ:– ನಾಳೆ ಬೆಳಿಗ್ಗೆ ಬೇಕಾದರೆ ಸದನವನ್ನು 10 ಗಂಟೆಗೆ ಕರೆಯಿರಿ.

ಅಧ್ಯಕ್ಷರು:– ನಾಳೆ ಬೆಳಿಗ್ಗೆ 10 ಗಂಟೆಗೆ ಉತ್ತರ ಕೊಡಿ.

ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್:– ನಾಳೆ ಬೆಳಿಗ್ಗೆ 10 ಗಂಟೆಗೆ ಕಾರ್ಯಕ್ರಮವೊಂದು ಇದೆ.

ಅಧ್ಯಕ್ಷರು:– ಇರಲಿ ಬಿಡಿ, ಇದಕ್ಕಿಂತ ಅದು ದೊಡ್ಡದಲ್ಲ, ಆಯಿತು, ನಾಳೆ ಬೆಳಿಗ್ಗೆ 10 ಗಂಟೆಗೆ ಉತ್ತರ ಕೊಡಿ. ಈಗ ಪ್ರಶ್ನೋತ್ತರ.

6. ಪ್ರಶ್ನೋತ್ತರ

(ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಸದನದಲ್ಲಿ ನೀಡಲಾದ ಉತ್ತರಗಳು

ಪೊಲೀಸ್ ದೂರುಗಳ ಪ್ರಾಧಿಕಾರ

91 (2057); ಶ್ರೀ ರುದ್ರಪ್ಪ ಮಾನಪ್ಪ ಲಮಾಣಿ (ಹಾವೇರಿ)

ಅ) ಕರ್ನಾಟಕ ರಾಜ್ಯದ ವಿವಿಧ ಜಿಲ್ಲೆಗಳಲ್ಲಿರುವ ಪೊಲೀಸ್ ದೂರು ಪ್ರಾಧಿಕಾರಗಳೆಷ್ಟು; (ಪೂರ್ಣ ವಿಳಾಸಗಳು ಹಾಗೂ ಸಂಪರ್ಕ ವಿವರಗಳನ್ನು ನೀಡುವುದು)

ಆ) ಈ ಆಯೋಗಗಳಿಗೆ ಎಷ್ಟು ದೂರು ಸಲ್ಲಿಕೆಯಾಗಿವೆ, ದೂರುಗಳ ಸಂಕ್ಷಿಪ್ತ ವಿವರಗಳು ಮತ್ತು ತೆಗೆದುಕೊಂಡ ಕ್ರಮಗಳ ವಿವರಗಳೇನು;

ಇ) ಈ ದೂರು ಪ್ರಾಧಿಕಾರದ ಸಿಬ್ಬಂದಿಗಳ ಸಂಖ್ಯೆ ಹಾಗೂ ಇತರೆ ಖರ್ಚು ವೆಚ್ಚಗಳೆಷ್ಟು? (ವಿವರಗಳನ್ನು ನೀಡುವುದು)

ಶ್ರೀ ಕೆ.ಜೆ. ಜಾರ್ಜ್ (ಮಾನ್ಯ ಗೃಹ ಸಚಿವರು)

ಅ) ರಾಜ್ಯದ ಒಟ್ಟು 23 ಜಿಲ್ಲೆಗಳಲ್ಲಿ ಪೊಲೀಸ್ ದೂರು ಪ್ರಾಧಿಕಾರಗಳು ಕಾರ್ಯಾರಂಭ ಮಾಡಿರುತ್ತದೆ. 6 ಜಿಲ್ಲೆಗಳಲ್ಲಿ ಕಾರ್ಯಾರಂಭ ಮಾಡಬೇಕಾಗಿರುತ್ತದೆ. ಇವುಗಳ ವಿವರಗಳನ್ನು ಅನುಬಂಧ–ಅ ದಲ್ಲಿ ಒದಗಿಸಲಾಗಿದೆ.

ಆ) ವಿವರವನ್ನು ಅನುಬಂಧ–ಆ ದಲ್ಲಿ ಒದಗಿಸಲಾಗಿದೆ.

ಇ) ಜಿಲ್ಲಾ ಪೊಲೀಸ್ ಕಛೇರಿಯ ಸಿಬ್ಬಂದಿಗಳನ್ನೇ ದೂರು ಪ್ರಾಧಿಕಾರದ ಕಾರ್ಯಗಳಿಗೆ ಉಪಯೋಗಿಸಲಾಗುತ್ತಿದೆ. ಆದ್ದರಿಂದ, ಇತರೇ, ಖರ್ಚು ವೆಚ್ಚಗಳಿರುವುದಿಲ್ಲ.